# I CAN ಅರ್ಥ್‌ಶಾಟ್ ಸವಾಲು



> *ನಮ್ಮ ಈ ಸುಂದರವಾದ ಗ್ರಹಯನ್ನು ತಮ್ಮ ಗೃಹವೆಂದು ಭಾವಿಸುವ ಎಲ್ಲಾ ಜೀವಿಗಳಿಗಾಗಿ ನಾವು ಭೂಮಿಯನ್ನು ಕಾಪಾಡಬಹುದು, ಈ ದಶಕದಲ್ಲಿನಾವು ತೆಗೆದುಕೊಳ್ಳುವಂತಹ ನಿರ್ಧಾರಗಳು, ನಮ್ಮ ವ್ಯಕ್ತಿತ್ವವನ್ನು ನಿರ್ಧರಿಸುತ್ತವೆ. ಹಾಗೆಯೇ ಆ ನಿರ್ಧಾರಗಳು ನಮ್ಮ ಯುವಜನರ ಭವಿಷ್ಯವನ್ನು ಸಹ ನಿರ್ಧರಿಸುತ್ತವೆ.*

**ಎಚ್‌ಆರ್‌ಎಚ್ ಪ್ರಿನ್ಸ್ ವಿಲಿಯಮ್ಸ್** | ಅರ್ಥ್ ಶಾಟ್ ಬಹುಮಾನದ ಸಂಸ್ಥಾಪಕರು ಹಾಗೂ ಅಧ್ಯಕ್ಷರು
ನವೆಂಬರ್ 5, ದಿ ಅರ್ಥ್‌ಶಾಟ್ ಪ್ರೈಸ್ ಅವಾರ್ಡ್ಸ್ 2026, ರಿಯೊ ಡಿ ಜನೀರೊ

## ಆತ್ಮೀಯ ಎಜುಹಿರೊ,

ನಮ್ಮ ಭೂಮಿಯ ಭವಿಷ್ಯವು ನಾವು ಇಂದು ಮಾಡುವಂತಹ ಆಯ್ಕೆಗಳ ಮೇಲೆ ಆಧಾರಪಟ್ಟಿರುತ್ತದೆ.

ಪ್ರಪಂಚದಾದ್ಯಂತ, ಜನಜೀವನವು ವಾತವರಣ ಬದಲಾವಣೆ, ಮಾಲಿನ್ಯ, ಅರಣ್ಯ ಮತ್ತು ವನ್ಯಜೀವದ ನಷ್ಟ, ಹಾಗೂ ಬೆಳೆಯುತ್ತಿರುವ ತ್ಯಾಜ್ಯದಂತಹ ಪಾರಿಸರಿಕ ಸವಾಲುಗಳನ್ನು ಎದುರಿಸುತ್ತಿದೆ. ಈ ಸಮಸ್ಯೆಗಳನ್ನು ತ್ವರಿತವಾಗಿ ನಿಬಾಯಿಸಬೇಕು, ಸ್ಫೂರ್ತಿದಾಯಕ ಪರಿಹಾರಗಳನ್ನು ಈಗಾಗಲೆ ವಿಜ್ಞಾನಿಗಳು, ರೈತರು, ಉದ್ಯಮಿಗಳು, ಸಮುದಾಯದ ನಾಯಕರು ಹಾಗು ಯುವಜನರು ಕಂಡುಕೊಂಡಿದ್ದಾರೆ.

ಅರ್ಥ್‌ಶಾಟ್ ಬಹುಮಾನವನ್ನು ರಚಿಸಿದ ಉದ್ದೇಶವೇನೆಂದರೆ, ದಿಟ್ಟವಾದ ಪಾರಿಸರಿಕ ಪರಿಹಾರಗಳನ್ನು ಕಂಡುಹಿಡಿಯುವುದು, ಅದನ್ನು ಆಚರಿಸುವುದು, ಹಾಗೂ ಸಹಕರಿಸುವುದಾಗಿರುತ್ತದೆ. ತ್ವರಿತತೆ + ಆಶಾವಾದ = ಉತ್ತಮ ಕಾರ್ಯ ಎಂಬ ನಂಬಿಕೆಯಿಂದ ಮುನ್ನುಗ್ಗುತ್ತಿರುವ, ಈ ಅಭಿಯಾನವು ಜನರು ಹಾಗೂ ಆಲೋಚನೆಗಳು ಒಟ್ಟಾಗಿ ಕೆಲಸ ಮಾಡಿದಾಗ ಸ್ವಚ್ಛಂದವಾದ, ಆರೋಗ್ಯಕರವಾದ ಹಾಗೂ ಸುರಕ್ಷಿತ ಭವಿಷ್ಯವನ್ನು ರೂಪಿಸುತ್ತದೆ ಎಂಬುದನ್ನು ಎತ್ತಿತೋರುತ್ತದೆ.

**ಈಗ ಇದು ನಿಮ್ಮ ಮಕ್ಕಳ ಸರದಿ.**
**ದಿ ಅರ್ಥ್‌ಶಾಟ್ ನನ್ನಿಂದ ಸಾಧ್ಯ ಸವಾಲು ಅಭಿಯಾನವು 9–17 ವಯೋಮಾನದ ಮಕ್ಕಳೂ** ತಮ್ಮ ಸ್ಥಳೀಯ ಸಮಸ್ಯೆಗಳನ್ನು ಗುರುತಿಸಲು, ಪರಿಹಾರಗಳನ್ನು ಕಂಡುಹಿಡಿಯಲು ಮತ್ತು ನಮ್ಮ ಭೂಮಾತೆಯನ್ನು ಪುನರುತ್ಥಾನಗೊಳಿಸಲು ಸಹಾಯ ಮಾಡುವಂತಹ ಕ್ರಮಗಳನ್ನು ಕೈಗೊಳ್ಳಲು ಆಹ್ವಾನಿಸುತ್ತಿದೆ. ಮಕ್ಕಳಿಗೆ ಅವರ ಪರಿಕಲ್ಪನೆಗಳಿಗೂ ಮಹತ್ವವಿದೆ ಎಂದು ತೋರಿಸಿದಾಗ, ಅವರು ಶಾಲೆಗಳಲ್ಲಿ, ಮನೆಯಲ್ಲಿ, ಹಾಗೂ ಸಮುದಾಯದಲ್ಲಿ ಸದೃಢ ಪರಿವರ್ತನೆಯನ್ನು ತರುವವರಾಗಿ ಹೊರಹೊಮ್ಮುತ್ತಾರೆ.

**ಬದಲಾವಣೆಗಾಗಿ ಹೊಸ ವಿನ್ಯಾಸ, ದಿ ಅಲೇನಾ ಫೌಂಡೇಶನ್, ಹಾಗೂ ದಿ ಅರ್ಥ್‌ಶಾಟ್ ಬಹುಮಾನ** ಅಭಿಯಾನಗಳು ಭಾರತದಾದ್ಯಂತ ಎಲ್ಲಾ ಮಕ್ಕಳು ತಮ್ಮಲ್ಲಿನ "ನನ್ನಿಂದ ಸಾಧ್ಯ" ಎನ್ನುವ ಮಹಾಶಕ್ತಿಯನ್ನು ಅನಾವರಣಗೊಳಿಸಲು ಮತ್ತು ಸಕಾರಾತ್ಮಕ ಬದಲಾವಣೆಯನ್ನು ಸೃಷ್ಟಿಸುತ್ತಿರುವ ಯುವಜನರ ಚಳುವಳಿಯನ್ನು ಸೇರಿಕೊಳ್ಳಲು ಆಹ್ವಾನ ನೀಡುತ್ತಿವೆ.

ಒಗ್ಗಟ್ಟಿನಿಂದ, ನಾವೆಲ್ಲರು ಸಹ ಒಂದು ಸ್ವಚ್ಛಂದವಾದ, ಆರೋಗ್ಯಕರವಾದ ಹಾಗೂ ಹೆಚ್ಚು ಸುಸ್ಥಿರವಾದ ಭವಿಷ್ಯವನ್ನು ನಿರ್ಮಿಸಲು ಸಾಧ್ಯವಾಗುತ್ತದೆ.

ಜೇಸನ್ ನಾಫ್, ಸಿಇಓ
ದಿ ಅರ್ಥ್‌ಶಾಟ್ ಬಹುಮಾನ

ಕಿರಣ್ ಬೀರ್ ಸೇಠಿ
ಸಂಸ್ಥಾಪಕರು,
ಬದಲಾವಣೆಗಾಗಿ ಹೊಸ ವಿನ್ಯಾಸ

ಪೆಡ್ರೊ ಹಾರ್ಟಂಗ್,
ಸಿಇಓ, ಅಲೇನ ಫೌಂಡೇಶನ್

ಸವಾಲಿನ ಅನುಷ್ಠಾನ ಪಾಲುದಾರರು

ಇವೆಂಟ್ ಪಾರ್ಟ್‌ನರ್

# ನೀವು ಸಿದ್ಧವೇ?

3 ರಿಂದ 5 ಜನರ ಸೂಪರ್ ಸ್ಕ್ವಾಡ್ ತಂಡವನ್ನು ಸಿದ್ಧಪಡಿಸಿ.
ಈ 4 ಹೆಜ್ಜೆಗಳನ್ನು ಅನುಸರಿಸಿ

**5 ವಿಜೇತರಿಗೆ ಪ್ರತಿಯೊಬ್ಬರಿಗೂ $2000 ಮೌಲ್ಯದ ಅನುದಾನಗಳು ಸಿಗಲಿದೆ.**

ತೀರ್ಪುಗಾರರ ಸಮಿತಿಯು **25 ಯೋಜನೆಗಳನ್ನು**ಆಯ್ಕೆಮಾಡಿಕೊಂಡು ಅದರಲ್ಲಿ **5 ವಿಜೇತರನ್ನು ಸೂಚಿಸುತ್ತದೆ (ಪ್ರತಿ ಅರ್ಥ್‌ಶಾಟ್ ವಿಭಾಗದಲ್ಲಿ 1 ವಿಜೇತರು)**

ಪ್ರತಿ ವಿಜೇತರಿಗೂ **$2000 ಮೌಲ್ಯದ ಅನುದಾನಗಳು ಸಿಗಲಿದೆ,** ಅವರಿಗೆ ಸಹಾಯಮಾಡಲು ಒಬ್ಬ ಮಾರ್ಗದರ್ಶಿ, **ಹಾಗೂ ಮುಂಬಯಿಯಲ್ಲಿ ನಡೆಯುವ ಅರ್ಥ್‌ಶಾಟ್ ಪ್ರೈಸ್ ಅವಾರ್ಡ್ಸ್ ಅಂಡ್ ಸಮ್ಮಿಟ್ ನಲ್ಲಿ ಭಾಗವಹಿಸುವ ಆಹ್ವಾನ ಪತ್ರಿಕೆ ದೊರೆಯಲಿದೆ.**

ವಿಜೇತರು ಕಾಲಕಾಲಕ್ಕೆ ಡಿಎಫ್‌ಸಿ ಮತ್ತು ಅರ್ಥ್‌ಶಾಟ್‌ಗೆ ಪ್ರಗತಿಯ ವರದಿ ಸಲ್ಲಿಸಬೇಕು.

## ಹಂತ 1
## ಅನುಭೂತಿ
ಹೃದಯದಿಂದ ಆಲೋಚಿಸಿ

### 1. ಗಮನಿಸಿ

ನಿಮ್ಮ ಆಸುಪಾಸಿನ ಪರಿಸರವನ್ನು ಸೂಕ್ಷ್ಮವಾಗಿ ಗಮನಿಸಿ.

ನಿಮಗೆ ಸಮಸ್ಯೆ ಎನಿಸುವಂತಹ ಪರಿಸರ ಬದಲಾವಣೆಗಳನ್ನು ಗಮನಿಸಿ. ನಿಮ್ಮ ಅವಲೊಕನಗಳ ಒಂದು ನಕ್ಷೆಯನ್ನು ರಚಿಸಿ - ಈ ಕೆಳಗಿನವುಗಳ ಮೂಲಕ ನಿಮ್ಮ ಪ್ರಪಂಚವನ್ನು ರಚಿಸಿ.

- ಏನನ್ನು ಗಮನಿಸುತ್ತಿದ್ದೀರಿ (ಉದಾ: ಮಾಲಿನ್ಯ, ನೀರಿನ ಅಭಾವ, ಇಂಧನ ಪೋಲು ಇತ್ಯಾದಿ)
- ನಿಮಗೆ ಆಗುತ್ತಿರುವ ಅನುಭೂತಿ ಏನು (ಉದಾ: ಹತಾಶೆ, ಹೊಣೆಗಾರಿಕೆ, ಕುತೂಹಲ. ಇತ್ಯಾದಿ.)
- ಏನನ್ನು ಆಲಿಸುತ್ತಿದ್ದೀರಿ (ಉದಾ: ಸಾಮೂಹಿಕ ಸಮಸ್ಯೆಗಳು, ವಾರ್ತಾ ಸುದ್ದಿ ವರದಿಗಳು. ಇತ್ಯಾದಿ)

### 2. ಒಂದು ಅರ್ಥ್‌ಶಾಟ್ ವಿಭಾಗಕ್ಕೆ ಜೊತೆಯಾಗಿ.

ನಿಮ್ಮ ಅವಲೊಕನಗಳನ್ನು ತಂಡದೊಂದಿಗೆ ಚರ್ಚಿಸಿ.
ಯಾವ ಅರ್ಥ್‌ಶಾಟ್ ವಿಭಾಗಕ್ಕೆ ನಿಮ್ಮ ಸವಾಲು ಸರಿಹೊಂದುತ್ತದೆ ಎಂದು ಚರ್ಚಿಸಿ?

- ನಿಸರ್ಗವನ್ನು ಸಂರಕ್ಷಿಸಿ ಮತ್ತು ಪುನಸ್ಸ್ಥಾಪಿಸಿ
- ನಮ್ಮ ಮಹಾಸಾಗರಗಳನ್ನು ಪುನರುಜ್ಜೀವಿತಗೊಳಿಸಿ
- ನಮ್ಮ ವಾತಾವರಣವನ್ನು ಸರಿಪಡಿಸಿ
- ನಮ್ಮ ವಾಯುವನ್ನು ಶುಚಿಗೊಳಿಸಿ
- ಒಂದು ತ್ಯಾಜ್ಯ-ಮುಕ್ತ ಜಗತ್ತನ್ನು ರಚಿಸಿ

### 3. ಮತದಾನ

ನಿಮ್ಮ ಅವಲೋಕನಗಳನ್ನು ತಂಡದೊಂದಿಗೆ ಹಂಚಿಕೊಳ್ಳಿ ಹಾಗೂ ನೀವೆಲ್ಲರು ಸಹ ನೋಡಬಯಸುವಂತಹ ಒಂದು ಬದಲಾವಣೆಯನ್ನು ನಿಮ್ಮ ಸವಾಲಾಗಿಸಿಕೊಂಡು ಅದಕ್ಕೆ ಮತದಾನ ಮಾಡಿ.


### 4. ಆಳವಾಗಿ ಆಲೋಚಿಸಿ

ನಿಮ್ಮ ಸವಾಲನ್ನು ಆಯ್ಕೆಮಾಡಿಕೊಂಡ ನಂತರ, ಅದನ್ನು ಇನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಆಳವಾಗಿ ಆಲೋಚಿಸಿ. ನಿಮಗೆ ಸಹಾಯ ಮಾಡಬಹುದಾದ ಕೆಲವು ಪ್ರಶ್ನೆಗಳು ಇಲ್ಲಿವೆ.

- ಇದು ಎಲ್ಲಿ ಮತ್ತು ಹೇಗೆ ಸಂಭವಿಸಿತು?
- ಇದರಿಂದ ಯಾರು ಅಭಾದಿತರು?
- ಇದು ಜನರು, ಪ್ರಾಣಿಗಳು ಅಥವಾ ಪರಿಸರದ ಮೇಲೆ ಹೇಗೆ ಪ್ರಭಾವ ಬೀರುತ್ತಿದೆ?

### 5. ನಿಮ್ಮನ್ನು ನೀವು ತೊಡಗಿಸಿಕೊಳ್ಳಿ

ಈಗ, ಈ ಪರಿಸ್ಥಿತಿಯಿಂದ ಬಾಧಿತರಾದವರೊಂದಿಗೆ ಹಾಗೂ ಇದರಲ್ಲಿ ಭಾಗಿಯಾದವರೊಂದಿಗೆ ಹೋಗಿ ಮಾತನಾಡಿ. ಅವರ ಸಮಸ್ಯೆಗಳೇನು ಎಂದು ಅರ್ಥ ಮಾಡಿಕೊಳ್ಳಲು ಅವರ ಸಂದರ್ಶನ ಮಾಡಿ, ಹಾಗೆ ಮಾಡಿದಾಗ ನೀವು ಅವರಿಗಾಗಿ ಪರಿಹಾರ ಹುಡುಕುವ ಬದಲು ಅವರ ಜೊತೆಯಲ್ಲಿ ಪರಿಹಾರವನ್ನು ರಚಿಸಬಹುದಾಗಿರುತ್ತದೆ.



## ಹಂತ 2
## ಪರಿಕಲ್ಪನೆ
ಯಶಸ್ಸನ್ನು ಕಲ್ಪಿಸಿಕೊಳ್ಳಿ

### 1. ವಿವೇಚನೆಯುಕ್ತ ಉಪಕರಣಗಳು

- ಎಲ್ಲಾ ಆಲೋಚನೆಗಳು ಸಹ ಒಳ್ಳೆಯ ಆಲೋಚನೆಗಳೇ... ಯಾವುದೇ ವಿಚಿತ್ರವಾದ ಆಲೋಚನೆಗಳಿಂದ ಹಿಂಜರಿಯಬೇಡಿ.
- ತಂಡದ ಇತರರ ಆಲೋಚನೆಗಳನ್ನು ಸಹ ಗೌರವಿಸಿ - ಯಾವಾಗಲು 'ಆದರೆ' ಎನ್ನುವ ಪದದ ಬದಲಿಗೆ 'ಹಾಗೂ' ಎಂಬ ಪದ ಬಳಸಿ.
- ಉತ್ತಮವಾದ ಸ್ಪಷ್ಟತೆಗಾಗಿ ನಿಮ್ಮ ಆಲೋಚನೆಯನ್ನು ಸರಿಯಾಗಿ ವಿವರಿಸಿ.

ನೀವು ಹಲವಾರು ಆಲೋಚನೆಗಳು ಮತ್ತು ಪರಿಹಾರಗಳನ್ನು ರಚಿಸಿದ ನಂತರ, ನೀವು ಕಾರ್ಯಗತಗೊಳಿಸುವಂತಹ ಪರಿಹಾರಗಳನ್ನು ಕ್ಯುಬಿಎಲ್ ಟೂಲ್ ಅನ್ನು ಬಳಸಿ ಕಿರುಪಟ್ಟಿ ಸಿದ್ಧಪಡಿಸಿ. ನಿಮ್ಮ ಪರಿಹಾರಗಳು ಹೀಗಿರಬೇಕು:

**ವೇಗವಾಗಿ** ಕಾರ್ಯಗತಗೊಳಿಸುವಂತಿರಬೇಕು
**ಸದೃಢವಾಗಿರಬೇಕು**
**ದೀರ್ಘಾವಧಿಯ** ವರೆಗು ಪ್ರಭಾವ ಬೀರುವಂತಿರಬೇಕು

### 2. ಮತದಾನ

ನೀವು ಆಯ್ಕೆ ಮಾಡಿಕೊಂಡ ಸವಾಲನ್ನು ಉತ್ತಮವಾಗಿ ಸರಿಪಡಿಸಬಹುದಾದ ಪರಿಕಲ್ಪನೆಗೆ ಮತದಾನ ಮಾಡಿ.

ಒಂದು ಸಕ್ಷಮವಾದ ಪರಿಹಾರವನ್ನು ರಚಿಸಲು ಹಲವಾರು ಪರಿಕಲ್ಪನೆಗಳನ್ನು ಒಟ್ಟುಗೂಡಿಸಲು ಪ್ರಯತ್ನಿಸಿ.



**ಅರ್ಥ್‌ಶಾಟ್‌ನ ಕೊನೆಯ ಹಂತದ ಸ್ಪರ್ಧಿಗಳಂತೆ ಆಲೋಚಿಸಿ, ನಿಮ್ಮನ್ನು ನೀವೆ ಈ ಪ್ರಶ್ನೆಗಳನ್ನು ಕೇಳಿಕೊಳ್ಳಿ:**

- ಈ ಪರಿಹಾರವು ಅತ್ಯಧಿಕ ಜನರಿಗೆ ಹೇಗೆ ಸಹಯಾ ಮಾಡಬಹುದು?
- ಈ ಪರಿಹಾರವು ನಮ್ಮ ನಿಸರ್ಗ ಹಾಗು ಪರಿಸರಕ್ಕು ಸಹ ಸಹಯಾಕವಾಗಬಹುದೇ?
- ಇದು ಸೃಜನಾತ್ಮಕ ಹಾಗೂ ಸದೃಢವಾದ ಪರಿಹಾರವೇ?
- ಈ ಪರಿಹಾರವನ್ನು ಇತರೆ ಶಾಲೆಯವರು ಹಾಗೂ ಸಮುದಾಯಗಳು ಅನುಕರಿಸಬಹುದೆ?
- ಇದು ದೀರ್ಘಾವಧಿಯ ಪರಿಹಾರವೇ? ಇದು ಸಮಂಜಸವಾದ ಹಾಗೂ ಕಾರ್ಯರೂಪಕ್ಕೆ ತರಬಹುದಾದ ಪರಿಹಾರವೇ?

## ಹಂತ 3
## ಮಾಡು
ಬದಲಾಗುವಂತೆ ಮಾಡು

### 1. ಯೋಜನೆ

ಯೋಜನೆಗಳನ್ನು ಮಾಡಲು ಕೆಳಗಿನವುಗಲನ್ನು ಬಳಸಿ

- ಯಾವ ಸಂಪನ್ಮೂಲಗಳು ಬೇಕಾಗುತ್ತದೆ?
- ಆಯ-ವ್ಯಯಗಳು ಎಷ್ಟು?
- ಹಣವನ್ನು ನೀವು ಹೇಗೆ ಪಡೆಯುತ್ತೀರಿ?
- ಎಷ್ಟು ಜನರು ಬೇಕಾಗುತ್ತಾರೆ?
- ಎಷ್ಟು ಸಮಯ ಬೇಕಾಗುತ್ತದೆ?
- ನಿಮ್ಮ ಕೆಲಸಗಳನ್ನು ಹೇಗೆ ದಾಖಲಿಸುತ್ತೀರಿ?

ನಿಮ್ಮ ಮನಸನ್ನು ಶಕ್ತಿಗೊಳಿಸುವ ಪಾತ್ರಗಳು ಮತ್ತು ಜವಾಬ್ದಾರಿಗಳನ್ನು ಆಯ್ಕೆ ಮಾಡಿಕೊಳ್ಳಿ

### 2. ಕಾರ್ಯಗತ ಮಾಡುವುದು

ಹೊರಗೆ ಹೋಗಿ ನಿಮ್ಮ ಯೋಜನೆಯನ್ನು ಕಾರ್ಯರೂಪಕ್ಕೆ ತನ್ನಿ.
**ಹೌದು, ನಿಮಗೆ ಸಾಧ್ಯ!**

### 3. ಪ್ರತಿಫಲನ

- ನೀವು ಈ ಪರಿಸ್ಥಿತಿಯಿಂದ ತಿಳಿದುಕೊಂಡ 3 ವಿಷಯಗಳು ಯಾವುವು?
- ನಿಮ್ಮ ಸಹಚರರಿಂದ ಕಲಿತ 2 ವಿಷಯಗಳು ಯಾವುವು?
- ನಿಮ್ಮ ಬಗ್ಗೆ ನೀವು ತಿಳಿದುಕೊಂಡ 1 ವಿಷಯ ಯಾವುದು?

ನಿಮ್ಮ ಯೋಜನೆಯ ಪ್ರಭಾವವನ್ನು ಉಳಿಸಿಕೊಳ್ಳುವ ಮಾರ್ಗಗಳ ಬಗ್ಗೆ ಯೋಚಿಸಿ?



**ಸ್ಫೂರ್ತಿದಾಯಕ, ವಿಸ್ತರಿಸಬಹುದಾದ, ಸೃಜನಶೀಲ, ಅಂತರ್ಗತ, ಪ್ರಾಯೋಗಿಕ ಮತ್ತು ಆಶಾವಾದಿ** ಪರಿಹಾರಗಳನ್ನು ಅರ್ಥ್‌ಶಾಟ್ ಪ್ರಶಸ್ತಿ ಆಚರಿಸುತ್ತದೆ. ನಿಮ್ಮ ಅರ್ಥ್‌ಶಾಟ್ ಪ್ರದೇಶದಲ್ಲಿ ಕೆಲಸ ಮಾಡುತ್ತಿರುವ ಸಂಸ್ಥೆಗಳು, ನವೋದ್ಯಮಿಗಳು, ವಿಜ್ಞಾನಿಗಳು ಅಥವಾ ವೃತ್ತಿಪರರನ್ನು ಸಂಪರ್ಕಿಸಿ.

## ಹಂತ 4
## ಹಂಚಿಕೆ
ಈಗ ನನಗೆ ಸಾಧ್ಯ!
ನಿಮಗೂ ಸಹ ಸಾಧ್ಯ.

### 1. ಸಲ್ಲಿಕೆ

ನಿಮ್ಮ ಯೋಜನೆಗಳನ್ನು ನಮ್ಮ challenge.dfcworld.com ನೊಂದಿಗೆ ಹಂಚಿಕೊಳ್ಳಿ.

ಸೈಟ್‌ನಲ್ಲಿ ನೀಡಲಾದ ಸಲ್ಲಿಕೆಯ ಮಾರ್ಗಸೂಚಿಗಳನ್ನು ದಯವಿಟ್ಟು ಅನುಸರಿಸಿ. ನೀವು **ಫೋಟೋ ಸುದ್ದಿ ಅಥವಾ ವೀಡಿಯೋ ಸುದ್ದಿ** ಮೂಲಕ ಸಲ್ಲಿಸಬಹುದು.

FIDS ಹಂತದಲ್ಲಿ ಬರುವ ಪ್ರತಿ ಪ್ರಶ್ನೆಗಳಿಗೆ ಉತ್ತರಿಸಿ.
**ಫೋಟೋ ಸುದ್ದಿ:** ಪ್ರತಿ ಹಂತದ ಫೋಟೊಗಳನ್ನು ಅಪ್‌ಲೋಡ್ ಮಾಡುವುದು, ಪ್ರತಿ ಯೋಜನಾ ಪ್ರಕ್ರಿಯೆಯ ದಾಖಲಾತಿಗಳನ್ನು ನೆನಪಿಟ್ಟುಕೊಳ್ಳಬೇಕು.

**ವಿಡಿಯೋ ಸುದ್ದಿ:** ನಿಮ್ಮ ಯೋಜನೆಗಳನ್ನು ವೀಡಿಯೋ ಮೂಲಕ ಯೂಟ್ಯೂಬ್‌ನಲ್ಲಿ ಹಾಕಿ ಅದರ ಲಿಂಕ್‌ನ್ನು ಸಲ್ಲಿಸುವ ಜಾಲತಾಣದಲ್ಲಿ ಪೇಸ್ಟ್ ಮಾಡುವುದು.

**ದಯವಿಟ್ಟು ನೆನಪಿಟ್ಟುಕೊಳ್ಳಿ**
ನೀವು ಗರಿಷ್ಠವಾಗಿ 16 ಫೋಟೊಗಳನ್ನು ಅಪ್‌ಲೋಡ್ ಮಾಡಬಹುದು, ಪ್ರತಿ 4 ಹಂತದಲ್ಲಿ ನೀವು ವೀಡಿಯೋ ಮಾಡುತ್ತಿದ್ದರೆ 3 ನಿಮಿಷಗಳಿಗಿಂತ ಮೀರಿರಬಾರದು.

### 2. ಪ್ರೇರಣೆ

ನಿಮ್ಮ ವಿಭಿನ್ನವಾದ ಕಥೆಯನ್ನು ವಿಸ್ತರಿಸಲು ಇಲ್ಲಿ ಕೆಲವು ಉಪಾಯಗಳಿವೆ:-)

- ಶಾಲಾ ಆವರಣ
- ದಿನಪತ್ರಿಕೆಯ ಲೇಖನ
- ದೂರದರ್ಶನ
- ರೇಡಿಯೋ
- ಸಾಮಾಜಿಕ ಜಾಲತಾಣ
- ಪ್ರದರ್ಶನ
- ಸಮುದಾಯ ಪ್ರದರ್ಶನ
- ಕಲೆ ಅಥವಾ ರಂಗಭೂಮಿ ಪ್ರದರ್ಶನ
- ವಿಜ್ಞಾನ ಮೇಳ
- ಪ್ರಕೃತಿ ಸಂರಕ್ಷಣಾ ಸಂಘಟನೆಗಳಲ್ಲಿಪ್ರದರ್ಶನ



**#ICANEarthshotChallenge ನ್ನು ಬಳಸಿ**

ನಿಮ್ಮ ಯೋಜನೆಯನ್ನು
**challenge.dfcworld.org** ತಾಣದಲ್ಲಿ ಸಲ್ಲಿಸಿ

# I CAN ಅರ್ತ್‌ಷಾಟ್ ಸವಾಲು

ನನ್ನಿಂದ ಸಾಧ್ಯ ಅರ್ತ್‌ಷಾಟ್ ಸವಾಲು ಅಭಿಯಾನಗಳು ಮಕ್ಕಳನ್ನು ಮತ್ತು ಯುವ ಜನರನ್ನು ಪ್ರಕೃತಿಯಲ್ಲಿ ಪರಿವರ್ತನೆ ತರುವವರನ್ನಾಗಿಸುವ ಕಾರ್ಯಕ್ರಮಕ್ಕೆ ಆಹ್ವಾನಿಸುತ್ತದೆ. ಇದು ಐದು ವಿಭಾಗಗಳ ಮೇಲೆ ಕೇಂದ್ರಿಕೃತವಾಗಿದೆ: **ರಕ್ಷಣೆ ಮತ್ತು ಪುನಃಸ್ಥಾಪನೆ, ನಮ್ಮ ಗಾಳಿ ಶುದ್ಧತೆ, ಸಾಗರಗಳ ಪುನರುಜ್ಜೀವನ, ತ್ಯಾಜ್ಯ ಮುಕ್ತ ಜಗತ್ತು, ಮತ್ತು ನಮ್ಮ ಹವಾಮಾನವನ್ನು ಸರಿಪಡಿಸುವುದು.**

ಮಕ್ಕಳು ತಮ್ಮ **ಭಾವನೆಗಳನ್ನು, ಊಹೆಗಳನ್ನು, ತಮ್ಮ ಚೌಕಟ್ಟುಗಳ ಮೂಲಕ ಸಮುದಾಯಗಳ** ಸವಾಲುಗಲನ್ನು ಗುರುತಿಸುವುದರಿಂದ ಒಂದು ಅಥವಾ ಹೆಚ್ಚುಅರ್ತ್ ಷಾಟ್ ಗುರಿಗಳ ಬಗ್ಗೆ ಪರಿಹಾರಗಳನ್ನು ಕಂಡುಕೊಳ್ಳಬಹುದು. "**ನಾವು ಹೇಗಿರಬೇಕು...**" ಮತ್ತು "**ಹೆಚ್ಚು ಅವಕಾಶಗಳನ್ನು ಸೃಷ್ಟಿಸುವುದು...**" ಇವುಗಳು ಕಲ್ಪನೆಯ ಕಿಡಿ ಹೊತ್ತಿಸಲು ವಿನ್ಯಾಸಗೊಳಿಸಲಾಗಿದೆ, ಉತ್ತರವನ್ನು ಹುಡುಕಲು ಅಲ್ಲ. ಇದನ್ನು ನಿಮ್ಮ ಸ್ಥಳೀಯ ಸಮುದಾಯಗಳಿಗೆ ಹೊಸ ಸವಾಲುಗಲನ್ನು ಮತ್ತು ಅವಕಾಶಗಳನ್ನು ಸೃಷ್ಟಿಸಲು ಮತ್ತು ಜನರಿಗೆ ಮತ್ತು ನಮ್ಮ ಭೂಮಿಗೆ ಸಕಾರಾತ್ಮಕ ವ್ಯತ್ಯಾಸಗಳು ಉಂಟುಮಾಡುವಂತೆ ಉಪಯೋಗಿಸಿಕೊಳ್ಳಿ.

## ರಕ್ಷಣೆ ಮತ್ತು ಪುನಃಸ್ಥಾಪನೆ

ನಿಮಗೆ ಕೇಳಿಕೊಳ್ಳಿ: "**ನಾವು ಹೇಗಿರಬೇಕು..**

- ಸಸ್ಯಗಳು, ಅರಣ್ಯಜೀವಿಗಳು ಮತ್ತು ಜೈವಿಕ ವೈವಿಧ್ಯತೆಗಳು ಅಭಿವೃದ್ಧಿ ಹೊಂದಲು ಸ್ಥಳ.
- ಜಲ ಸಂಸ್ಕರಣೆ ಮತ್ತು ನೈಸರ್ಗಿಕ ಸಂಪನ್ಮೂಲಗಳನ್ನು ರಕ್ಷಿಸಲು ಹೊಸ ಮಾರ್ಗವನ್ನು ಸೃಷ್ಟಿಸುವುದು.
- ಸಮುದಾಯಗಳಿಗೆ ಅವರಿರುವ ಸ್ಥಳಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ಮತ್ತು ಪರಿಸರ ವ್ಯವಸ್ತೆಯನ್ನು ರಕ್ಷಿಸಲು ಪ್ರೇರೇಪಿಸುವುದು.

**ಪ್ರೇರಣೆ**
ಭಾರತದ ಖೇತಿ ಅಭಿಯಾನವು ರೈತರಿಗೆ ಕಡಿಮೆ ನೀರು ಬಳಸಿ ಹೆಚ್ಚು ಆಹಾರಗಳನ್ನು ಬೆಳೆಸಲು ಸಹಾಯ ಮಾಡುತ್ತದೆ.

## ವಾಯು ಶುದ್ಧೀಕರಣ

**ಈ ಕೆಳಗಿನ ಅಂಶಗಳನ್ನು ಪರಿಶೋಧಿಸಿ**

- ಪ್ರಕೃತಿಗೆ ಮತ್ತು ಜನರಿಗೆ ಹೆಚ್ಚು ಹಸಿರು ಮತ್ತು ಆರೋಗ್ಯಕರ ಸ್ಥಳಗಳನ್ನು ಸೃಷ್ಟಿಸುವುದು.
- ವಾಯುಮಾಲಿನ್ಯವನ್ನು ತಡೆಯಲು ಮತ್ತು ಗಾಳಿ ಮಲಿನವಾಗದಂತೆ ಮಾರ್ಗವನ್ನು ಹುಡುಕುವುದು.
- ವಾಯುವಿಹಾರ, ಸೈಕಲಿಂಗ್ ಹಾಗೂ ಸಮೂಹ ಸಾರಿಗೆ ಸೇರಿದಂತೆ ಸುಸ್ಥಿರ ಪ್ರಯಾಣವನ್ನು ಪ್ರೋತ್ಸಾಹಿಸುವುದು.

**ಪ್ರೇರಣೆ**
ಕೀನ್ಯ ಕಂಪನಿಯಾದ ಮುಕುರು ಸ್ವಚ್ಛವಾದ ಸ್ಟವ್‌ನಿಂದ ಮನೆಯ ಒಳಗಾಗುವ ಮಾಲಿನ್ಯವನ್ನು ಕಡಿತಗೊಳಿಸಬಹುದು.

## ನಮ್ಮ ಸಾಗರಗಳ ಪುನರುಜ್ಜೀವನ

**ಈ ಕೆಳಗಿನ ಅವಕಾಶಗಳನ್ನು ಪರಿಶೋಧಿಸಿ**

- ನದಿಗಳು, ಸಾಗರಗಳು ಮತ್ತು ಇನ್ನಿತರ ಜಲಮೂಲಗಳ ಮಾಲಿನ್ಯವನ್ನು ತಡೆಗಟ್ಟುವಿಕೆ.
- ನೀರನ್ನು ಪುನರ್ಬಳಕೆ, ಪರಿಷ್ಕರಣೆ ಮತ್ತು ಮಿತಬಳಕೆಯಿಂದ ಜಲಮಾಲಿನ್ಯವನ್ನು ಕಡಿಮೆ ಮಾಡುವುದು.
- ಸಮುದಾಯಗಳಿಗೆ ಪರಿಸರ ವ್ಯವಸ್ಥೆಯನ್ನು ಸ್ವಚ್ಛವಾಗಿ ಮತ್ತು ಆರೋಗ್ಯಕರವಾಗಿ ಇರಿಸಲು ಪ್ರೇರೇಪಿಸುವುದು.

**ಪ್ರೇರಣೆ**
ಆಸ್ಟ್ರೇಲಿಯಾದಲ್ಲಿ ಸ್ಥಳೀಯ ಮಹಿಳಾ ರೇಂಜರ್‌ಗಳು ಪರಿಸರ ವ್ಯವಸ್ಥೆಯನ್ನು ಸುಸ್ಥಿರಗೊಳಿಸಲು ಸಾಂಪ್ರದಾಯಿಕ ಜ್ಞಾನ ಮತ್ತು ತಂತ್ರಜ್ಞಾನವನ್ನು ಸಂಯೋಜಿಸುತ್ತಾರೆ.

## ತ್ಯಾಜ್ಯ ಮುಕ್ತ ಜಗತ್ತು ಸೃಷ್ಟಿಸುವುದು

ನಿಮ್ಮನ್ನು ನೀವೇ ಕೇಳಿಕೊಳ್ಳಿ:"**ನಾವು ಹೇಗಿರಬೇಕು..**

- ಸರಿಪಡಿಸುವಿಕೆ, ಹಂಚಿಕೆ ಮತ್ತು ಪುನರ್ಬಳಕೆಯಿಂದ ಉತ್ಪನ್ನಗಳನ್ನು ಮತ್ತು ವಸ್ತುಗಳ ಜೀವಿತಾವಧಿಯನ್ನು ವಿಸ್ತರಿಸುವುದು.
- ಪರ್ಯಾಯವಾಗಿ ಮರುಬಳಕೆ ಮಾಡಬಹುದಾದ ವಸ್ತುಗಳು ಮತ್ತುತ್ಯಾಜ್ಯ ವಿಂಗಡನೆಯಿಂದ ತ್ಯಾಜ್ಯವನ್ನು ಕಡಿಮೆ ಮಾಡುವುದು.
- ಅಮೂಲ್ಯವದ ಸಂಪನ್ಮೂಲಗಳನ್ನು ಪಡೆದು ಪ್ರಕೃತಿಗೆ ಬೇಕಾದುದನ್ನು ಹಿಂದಿರುಗಿಸಿ.

**ಪ್ರೇರಣೆ**
ಯುಕೆಯ ನೋಟ್‌ಪ್ಲಾ, ಪ್ಲಾಸ್ಟಿಕ್ ಪ್ಯಾಕೇಜಿಂಗ್ ಗೆ ಕಡಲಕಳೆ ಆಧಾರಿತ ಪರ್ಯಾಯಗಳನ್ನು ಸೃಷ್ಟಿಸಿದೆ.

## ನಮ್ಮ ಹವಾಮಾನವನ್ನು ಸರಿಪಡಿಸುವುದು

**ಈ ಕೆಳಗಿನ ಅವಕಾಶಗಳನ್ನು ಪರಿಶೋಧಿಸಿ**

- ನಿಮ್ಮ ಸಮುದಾಯಗಳಿಗೆ ಶುದ್ಧ ಮತ್ತು ನವೀಕರಿಸಬಹುದಾದ ಇಂಧನಗಳ ಬಗ್ಗೆ ಉತ್ತೇಜಿಸುವುದು.
- ಶಕ್ತಿಯ ಬಳಕೆಯನ್ನು ಕಡಿಮೆ ಮಾಡಿ ಮತ್ತು ಕಡಿಮೆ ಇಂಗಾಲದ ಜೀವನ ಮತ್ತು ಪ್ರಯಾಣ ವಿಧಾನಗಳನ್ನು ಬೆಂಬಲಿಸುವುದು.
- ಹವಾಮಾನ ಬದಲಾವಣೆಗೆ ಪ್ರಕೃತಿ ಮತ್ತು ಜನರು ಹೊಂದಿಕೊಳ್ಳುವಂತೆ ಸಹಾಯ ಮಾಡುವುದು.

**ಪ್ರೇರಣೆ**
ಬಾಂಗ್ಲಾದೇಶದ ಸ್ನೇಹಿತರು ಸಮುದಾಯಗಳು ಹವಾಮಾನ ಸಂಬಂಧಿತ ಸವಾಲುಗಳನ್ನು ಎದುರಿಸಲು ಸಹಾಯ ಮಾಡುತ್ತಾರೆ.

**www.designforchangeindia.com/earthshot-challenge | #ICANEarthshotChallenge**

THE EARTHSHOT PRIZE

ಸವಾಲಿನ ಅನುಷ್ಠಾನ ಪಾಲುದಾರರು

ಇವೆಂಟ್ ಪಾರ್ಟ್‌ನರ್

a JSW initiative